www.inyatrust.com

**EXAMINATION CODE : TET**

ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ 2149910

# KMSS

## ಪ್ರಶ್ನೆ ಪತ್ರಿಕೆ ಪುಸ್ತಿಕೆ-ಪತ್ರಿಕೆ-2

**(ಕನ್ನಡ ಮಾಧ್ಯಮ-ಸಮಾಜ ವಿಜ್ಞಾನ)**

**ಭಾಷೆ 1:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ,ಹಿಂದಿ,ಸಂಸ್ಕೃತ)**

**ಭಾಷೆ 2:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ.ಹಿಂದಿ,ಸಂಸ್ಕೃತ)**

**ಬಾಲವಿಕಾಸ ಮತ್ತು ಪೆಡಾಗಾಜಿ, ಮತ್ತು ಸಮಾಜ ವಿಜ್ಞಾನ**

**(ಪ್ರಶ್ನೆಪತ್ರಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ಓದಿರಿ)**

**ಗರಿಷ್ಠ ಅಂಕಗಳು : 150** | **ಗರಿಷ್ಠ ಅವಧಿ : 2.30 ಗಂಟೆಗಳು**

**(ಓ.ಎಂ.ಆರ್.ಉತ್ತರಪತ್ರಿಕೆಯಲ್ಲಿನ ವಿವರಗಳನ್ನು ಭರ್ತಿಮಾಡಲು ನೀಡುವ ಪ್ರಾರಂಭಿಕ 10 ನಿಮಿಷಗಳೂ ಸೇರಿದಂತೆ.)**

### ಸೂಚನೆಗಳು

1. 150 ಪ್ರಶ್ನೆಗಳಿರುವ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆ ಅಡಕವಾಗಿರುವ ಮೊಹರ್ ಆಗಿರುವ ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟಿರುವ ಪ್ರಶ್ನೆ ಪತ್ರಿಕೆ ಪುಸ್ತಿಕೆಯನ್ನು ನಿಮಗೆ ನೀಡಲಾಗಿದೆ.
2. ನಿಮಗೆ ನೀಡಿರುವ ಪ್ರಶ್ನೆ ಪತ್ರಿಕೆ ಪುಸ್ತಿಕೆಯು ನೀವು ಆಯ್ಕೆ ಮಾಡಿಕೊಂಡಿರುವ ಪತ್ರಿಕೆ / ಮಾಧ್ಯಮಕ್ಕೆ ಸಂಬಂಧಿಸಿದಿಯೇ ಎಂಬುದನ್ನು ದೃಢಪಡಿಸಿಕೊಳ್ಳಿ.
3. ಈ ಪ್ರಶ್ನೆ ಪತ್ರಿಕೆ ಪುಸ್ತಿಕೆಯು ಭಾಗ-I, ಭಾಗ-II, ಭಾಗ-III, ಮತ್ತು ಭಾಗ-IV ಎಂದು ಒಟ್ಟು 4 ಭಾಗಗಳನ್ನು ಹೊಂದಿದ್ದು, 150 ಬಹು ಆಯ್ಕೆ ಪ್ರಶ್ನೆಗಳನ್ನು ಹೊಂದಿರುತ್ತದೆ. ಪ್ರತಿ ಪ್ರಶ್ನೆಗೂ ಒಂದು ಅಂಕ ನಿಗದಿಪಡಿಸಲಾಗಿದೆ.

   ಭಾಗ - I ಭಾಷೆ 1 : (ಕನ್ನಡ /ಇಂಗ್ಲೀಷ್ /ಉರ್ದು /ತಮಿಳು /ತೆಲುಗು /ಮರಾಠಿ /ಹಿಂದಿ /ಸಂಸ್ಕೃತ) (ಪ್ರಶ್ನೆ ಸಂಖ್ಯೆ 1 ರಿಂದ 30)

   ಭಾಗ - II ಭಾಷೆ 2 : (ಕನ್ನಡ /ಇಂಗ್ಲೀಷ್ /ಉರ್ದು /ತಮಿಳು /ತೆಲುಗು /ಮರಾಠಿ /ಹಿಂದಿ /ಸಂಸ್ಕೃತ) (ಪ್ರಶ್ನೆ ಸಂಖ್ಯೆ 31 ರಿಂದ 60)

   ಭಾಗ - III ಬಾಲವಿಕಾಸ ಮತ್ತು ಪೆಡಾಗಾಜಿ (ಪ್ರಶ್ನೆ ಸಂಖ್ಯೆ 61 ರಿಂದ 90)

   ಭಾಗ - IV ಸಾಮಾಜಿಕ ಅಧ್ಯಯನ / ಸಮಾಜ ವಿಜ್ಞಾನ (ಪ್ರಶ್ನೆ ಸಂಖ್ಯೆ 91 ರಿಂದ 150)
4. ಭಾಗ-I ರಲ್ಲಿ ಭಾಷೆ-1 ವಿಷಯಕ್ಕೆ ಸಂಬಂಧಿಸಿದಂತೆ 30 ಪ್ರಶ್ನೆಗಳನ್ನು ಹೊಂದಿರುತ್ತದೆ ಮತ್ತು ಭಾಗ-II ರಲ್ಲಿ ಭಾಷೆ-2 ವಿಷಯಕ್ಕೆ ಸಂಬಂಧಿಸಿದಂತೆ 30 ಪ್ರಶ್ನೆಗಳನ್ನು ಹೊಂದಿರುತ್ತದೆ. ಈ ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ಎಲ್ಲಾ ಭಾಷೆಗಳಿಗೂ ಸಂಬಂಧಿಸಿದಂತೆ ಪ್ರಶ್ನೆಗಳು ಇರುತ್ತವೆ. ನೀವು ನಿಮ್ಮ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ / ಪ್ರವೇಶ ಪತ್ರದಲ್ಲಿ ನಮೂದಿಸಿರುವ ಭಾಷೆಗಳನ್ನೇ ಆಯ್ಕೆ ಮಾಡಿಕೊಂಡು ಭಾಷೆ-1 ಮತ್ತು ಭಾಷೆ-2 ಕ್ಕೆ ಉತ್ತರಿಸುವುದು ಕಡ್ಡಾಯವಾಗಿರುತ್ತದೆ.
5. ಅಭ್ಯರ್ಥಿಗಳು ಭಾಗ-II ರಲ್ಲಿನ ಭಾಷೆ-2 ಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಉತ್ತರಿಸುವಾಗ ಭಾಷೆ-1 ನ್ನು (ಭಾಗ-I) ಹೊರತುಪಡಿಸಿ ಇತರ ಭಾಷೆಯನ್ನು ಆಯ್ಕೆ ಮಾಡಿಕೊಂಡು ಉತ್ತರಿಸಬೇಕು.
6. ಈ ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ಭಾಗ-III ಮತ್ತು ಭಾಗ-IV ಕ್ಕೆ ಸಂಬಂಧಿಸಿದಂತೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಮಾಧ್ಯಮ-ಗಳಲ್ಲಿ ಪ್ರಶ್ನೆಗಳನ್ನು ನೀಡಲಾಗಿದೆ. ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ / ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದ ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಬೇಕು.
7. ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನಿಮಗೆ ನೀಡಿರುವ ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಕ್ರಮ ಸಂಖ್ಯೆ ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯ ಕ್ರಮ ಸಂಖ್ಯೆ ಒಂದೇ ಆಗಿದೆಯೇ ಗಮನಿಸುವುದು. ಬದಲಾವಣೆ ಇದ್ದಲ್ಲಿ ಅಭ್ಯರ್ಥಿಗಳು ತಕ್ಷಣ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ ಬೇರೆ ಪ್ರಶ್ನೆ ಪತ್ರಿಕೆಯನ್ನು ಪಡೆದುಕೊಳ್ಳುವುದು.
8. ಪ್ಲಾಸ್ಟಿಕ್ ಕವರ್‌ನಿಂದ ಪ್ರಶ್ನೆ ಪತ್ರಿಕೆ ಪುಸ್ತಿಕೆಯನ್ನು ಜಾಗರೂಕತೆಯಿಂದ ಹೊರತೆಗೆದು ಮೊಹರನ್ನು ಬಿಡಿಸಿ ಅಡಕವಾಗಿರುವ ಓ.ಎಂ.ಆರ್. ಶೀಟನ್ನು ಹೊರತೆಗೆಯುವುದು. ನಂತರ ಓ.ಎಂ.ಆರ್. ಶೀಟಿನ ಕ್ರಮ ಸಂಖ್ಯೆ 1 ರಿಂದ 13 ರವರೆಗಿನ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡುವುದು. ಭರ್ತಿ ಮಾಡದೆ ಖಾಲಿ ಉಳಿದ ಸಂದರ್ಭದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರಾಗುವಿರಿ.

SEAL



www.inyatrust.com

www.inyatrust.com



## PART – IV
## SOCIAL STUDIES / SOCIAL SCIENCE

91. ‘ಹಲ್ಮಿಡಿ’ ಶಾಸನದಿಂದ ಈ ರಾಜನ ಬಗ್ಗೆ ಐತಿಹ್ಯ ತಿಳಿದು ಬರುತ್ತದೆ.

(1) ಮಯೂರವರ್ಮ (2) ಕಾಕುತ್ಸವರ್ಮ
(3) ದಂತಿದುರ್ಗ (4) ಸ್ಕಂದವರ್ಮ

92. ಸಿಂಧೂ ನಾಗರೀಕತೆ ಮತ್ತು ಮೆಸಪಟೊಮಿಯಾ ನಾಗರೀಕತೆಯು ವ್ಯಾಪಾರ ಸಂಪರ್ಕ ಹೊಂದಿದೆ ಎಂದು ಸೂಚಿಸುವ ಐತಿಹ್ಯ :

(1) ಮುದ್ರೆಗಳು (2) ಶಿಲಾ ಶಾಸನ
(3) ದೇಶಿ ಸಾಹಿತ್ಯ (4) ವಿದೇಶಿ ಸಾಹಿತ್ಯ

93. ಭಾರತದಲ್ಲಿ ಮೊಟ್ಟಮೊದಲಿಗೆ ಸಾಮ್ರಾಜ್ಯ ಕಟ್ಟಿ ಐಕ್ಯತೆಯನ್ನು ಮೂಡಿಸಿದ ವಂಶ :

(1) ಕುಶಾಣರು (2) ಗುಪ್ತರು
(3) ಶಾತವಾಹನರು (4) ಮೌರ್ಯರು

94. ದಿಲ್ಲಿ ಸುಲ್ತಾನರು ಸ್ವತಹ ಪ್ರೋತ್ಸಾಹಿಸಿದ ಬೃಹತ್ ಉದ್ಯಮ :

(1) ಪಶುಪಾಲನೆ (2) ನೇಯ್ಗೆ
(3) ವ್ಯವಸಾಯ (4) ತೋಟಗಾರಿಗೆ

95. ಅಶ್ವಘೋಷ, ವಸುಮಿತ್ರ, ಸಂಗರಕ್ಷ ಮುಂತಾದ ಬೌದ್ಧ ವಿದ್ವಾಂಸರು ಇವನ ಕಾಲದಲ್ಲಿದ್ದರು.

(1) ಕನಿಷ್ಕ (2) ವಿಮಕಡ್‌ಫೀಸಸ್
(3) ಕುಜಲಕಡ್‌ಫೀಸಸ್ (4) ಅಶೋಕ

96. ಅಲ್ಲಾವುದ್ದೀನ್ ಖಿಲ್ಜಿಯ ಭವ್ಯರಚನೆ :

(1) ಕೆಂಪುಕೋಟೆ (2) ಅಲೈದರ್ವಾಜ
(3) ಬುಲಂದ್ ದರ್ವಾಜ (4) ಚಾರ್‌ಮಿನಾರ್

97. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಮೊಘಲ್ ಚಕ್ರವರ್ತಿಯಿಂದ ಹೈದರಾಬಾದ್, ಬಂಗಾಳ, ಗುಜರಾತ್ ಪ್ರದೇಶಗಳಲ್ಲಿ ತೆರಿಗೆ ರಹಿತ ವ್ಯಾಪಾರ ಮಾಡಲು ಅನುಮತಿ ಪಡೆದರು. ಇದರ ಪರಿಣಾಮ :

(1) ಹೈದರಾಬಾದ್, ಬಂಗಾಳ, ಗುಜರಾತ್‌ಗಳಲ್ಲಿ ಸಾಮ್ರಾಜ್ಯ ಸ್ಥಾಪಿಸಿದರು.
(2) ಚಕ್ರವರ್ತಿಯ ಸಾಮಂತರಾಗಿ ಹೈದರಾಬಾದ್, ಬಂಗಾಳ, ಗುಜರಾತ್‌ಗಳಲ್ಲಿ ಆಳಿದರು.
(3) ಬಕ್ಸಾರ್ ಕದನ ನಡೆಯಿತು.
(4) ಚಕ್ರವರ್ತಿಗೆ ಪ್ರತಿವರ್ಷ 3000 ರೂಪಾಯಿಗಳನ್ನು ಕೊಡಬೇಕಾಯಿತು.



www.inyatrust.com

www.inyatrust.com



**98.** ತಾನೇ ಪೇಶ್ವೆ ಎಂದು ಘೋಷಿಸಿ ಕಾನ್ಪೂರ ದಂಗೆಯ ನಾಯಕತ್ವ ವಹಿಸಿದವನು

(1) ಬಹದ್ದೂರ್ ಷಾ (2) ತಾತ್ಯಾ ಟೋಪಿ

(3) ನಾನಾ ಸಾಹೇಬ್ (4) ವಾಜಿದ್ ಅಲಿ

**99.** ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿರುವ ಕೇಂದ್ರ ಸರ್ಕಾರದ ಯೋಜನೆ :

(1) ಅನೌಪಚಾರಿಕ ಶಿಕ್ಷಣ ಯೋಜನೆ (2) ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ 1978

(3) ರಾಷ್ಟ್ರೀಯ ಶಿಕ್ಷಣ ನೀತಿ 1986 (4) ರಾಷ್ಟ್ರೀಯ ಸಾಕ್ಷರತಾ ಮಿಷನ್ 1988

**100.** ಭಾರತದ ಒಕ್ಕೂಟದಲ್ಲಿ ಕಾಶ್ಮೀರವು ವಿಲೀನಗೊಂಡ ವರ್ಷವಿದು.

(1) 1947 (2) 1949

(3) 1951 (4) 1961

**101.** 1962 ರಲ್ಲಿ ಚೀನಾ ಭಾರತದ ಮೇಲೆ ದಾಳಿ ಮಾಡಲು ಕಾರಣ

(1) ದಲೈಲಾಮ ಮತ್ತು ಅವನ ಅನುಯಾಯಿಗಳಿಗೆ ಆಶ್ರಯ ನೀಡಿದ್ದು.

(2) ಭಾರತ ಪಂಚಶೀಲ ತತ್ವಗಳಿಗೆ ಸಹಿ ಹಾಕಿದ್ದು.

(3) ಭಾರತದಿಂದ ನಿರಾಶ್ರಿತರು ಚೀನಾಕ್ಕೆ ನುಸುಳಿದ್ದು.

(4) ಚೀನಾದಲ್ಲಾದ ಸಮಾಜವಾದಿ ಕ್ರಾಂತಿ.

**102.** ಮಧ್ಯಯುಗದ ಭಾರತವನ್ನಾಳಿದ ಪ್ರಪ್ರಥಮ ಮಹಿಳೆ :

(1) ರಾಣಿ ಪದ್ಮಿನಿ (2) ಝಾನ್ಸಿರಾಣಿ ಲಕ್ಷ್ಮೀಬಾಯಿ

(3) ಸುಲ್ತಾನ್ ರಜಿಯಾ (4) ಬೇಗಂ ಹಜರತ್ ಮಹಲ್

**103.** ಹಿಂದೂಕುಶ್‌ನ ದಕ್ಷಿಣಭಾಗದಲ್ಲಿ ಮೊಟ್ಟ ಮೊದಲ ಬಾರಿಗೆ ಚಿನ್ನದ ನಾಣ್ಯಗಳನ್ನು ಟಂಕಿಸಿದ ಕುಶಾನರ ದೊರೆ :

(1) ಕುಜಲಕಡ್‌ಫೀಸಸ್ (2) ವಿಮಕಡ್‌ಫೀಸಸ್

(3) ಒಂದನೇ ಕನಿಷ್ಕ (4) ಎರಡನೇ ಕನಿಷ್ಕ



www.inyatrust.com

www.inyatrust.com



**104.** ಪಟ್ಟಿ 1 ನ್ನು ಪಟ್ಟಿ 2 ರೊಂದಿಗೆ ಹೊಂದಿಸಿ.

| | ಪಟ್ಟಿ-1 | | ಪಟ್ಟಿ-2 |
|---|---|---|---|
| 1 | ಅಹಿಂಸೆ | a | ಕದಿಯದಿರುವುದು |
| 2 | ಅಸ್ತೇಯ | b | ಸಂಸಾರಿ ಆಗದಿರುವುದು |
| 3 | ಅಪರಿಗ್ರಹ | c | ಹಿಂಸೆ ಮಾಡದಿರುವುದು |
| 4 | ಬ್ರಹ್ಮಚರ್ಯ | d | ಆಸ್ತಿಯನ್ನು ಹೊಂದದಿರುವುದು |

ಈ ಕೆಳಗೆ ನೀಡಿರುವ ಪಟ್ಟಿಯಲ್ಲಿ ಸೂಕ್ತ ಉತ್ತರ ಗುರುತಿಸಿ.

(1) 1-c, 2-a, 3-d, 4-b
(2) 1-d, 2-a, 3-c, 4-b
(3) 1-c, 2-d, 3-b, 4-a
(4) 1-b, 2-c, 3-a, 4-d

**105.** ಭರತ ಎಂಬ ಬುಡಕಟ್ಟು ಪೂರ್ವ ಪಂಜಾಬಿನ ಸತದ್ರು ಹಾಗೂ ಯಮುನಾ ಪ್ರದೇಶದಲ್ಲಿ ನೆಲೆಸಿತ್ತು. ಈ ಪ್ರದೇಶವೇ

(1) ಧರ್ಮಾವರ್ತ
(2) ಆರ್ಯಾವರ್ತ
(3) ಕರ್ಮಾವರ್ತ
(4) ದಾಸ್ಯಾವರ್ತ

**106.** ಗುರ್ಜರ ಮನೆತನದ ಆಳ್ವಿಕೆಯನ್ನು ಪ್ರಾರಂಭಿಸಿದ ಹರಿಶ್ಚಂದ್ರನ ನಾಲ್ವರು ಮಕ್ಕಳು ಆಳ್ವಿಕೆ ನಡೆಸಿದ ನಾಲ್ಕು ಪ್ರದೇಶಗಳಿವು.

(1) ಜೋಧ್‌ಪುರ, ನಂದಿಪುರ, ಭರೂಚ್ ಮತ್ತು ಉಜ್ಜೈನಿ.
(2) ಜೋಧ್‌ಪುರ, ನಂದಿಪುರ, ಕಳಿಂಗ ಮತ್ತು ಓರಿಸ್ಸಾ.
(3) ಉಜ್ಜೈನಿ, ಭರೂಚ್, ಮಾಳ್ವ ಮತ್ತು ನಂದಿಪುರ.
(4) ನಂದಿಪುರ, ಉಜ್ಜೈನಿ, ಓರಿಸ್ಸಾ ಮತ್ತು ಜೋಧ್‌ಪುರ.

**107.** ಸಮುದ್ರಗುಪ್ತನು ಜಾರಿಗೆ ತಂದ ಚಿನ್ನದ ನಾಣ್ಯವು ಇದನ್ನು ಸೂಚಿಸುತ್ತದೆ.

(1) ಇವನು ವೈಧಿಕ ವಿಧಿ-ವಿಧಾನಗಳನ್ನು ಅನುಸರಿಸುತ್ತಿದ್ದನೆಂದು.
(2) ಇವನು ಯುದ್ಧಪ್ರಿಯನಾಗಿದ್ದನೆಂದು.
(3) ಇವನು ಸಂಗೀತಪ್ರಿಯನಾಗಿದ್ದನೆಂದು.
(4) ಇವನು ಗುಪ್ತಶಕೆಯನ್ನು ಪ್ರಾರಂಭಿಸಿದನೆಂದು.

**108.** ಇದು ಭಕ್ತಿ ಚಳುವಳಿಯ ಪರಿಣಾಮಗಳಲ್ಲಿ ಒಂದಾಗಿದೆ.

(1) ಹಿಂದೂ ಆಚರಣೆಗಳಲ್ಲಿ ಸುಧಾರಣೆಗಳು ಕಂಡು ಬರಲಿಲ್ಲ.
(2) ಭಾರತದ ಪ್ರಾದೇಶಿಕ ಭಾಷೆಗಳು ವಿಕಾಸಗೊಂಡವು.
(3) ಉರ್ದು ಭಾಷೆಯಲ್ಲಿ ಮಾತ್ರ ಭಕ್ತಿಯ ಮಹತ್ವವನ್ನು ಸಾರಲಾಯಿತು.
(4) ಮುಸ್ಲಿಂರ ಆಚರಣೆಗಳಲ್ಲಿ ಸುಧಾರಣೆಗಳು ಕಂಡು ಬರಲಿಲ್ಲ.



www.inyatrust.com

www.inyatrust.com



**109.** ಭಾರತದ ಮೇಲೆ ಅಲೆಗ್ಸಾಂಡರ್‌ನ ದಾಳಿಯಿಂದಾದ ಪರಿಣಾಮ :

(1) ಭಾರತೀಯರು ಸಂಸ್ಕೃತವನ್ನು ಮರೆತು ಗ್ರೀಕ್ ಭಾಷೆಯನ್ನು ಕಲಿತರು.

(2) ಭಾರತೀಯ ಗ್ರಂಥಗಳು ಗ್ರೀಕ್ ಭಾಷೆಗೆ ತರ್ಜುಮೆಗೊಂಡವು.

(3) ಭಾರತೀಯ ಸಂಸ್ಕೃತಿಯು ಅವನತಿಯತ್ತ ಸಾಗಿತು.

(4) ಭಾರತ ಗ್ರೀಕ್ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಿತು.

**110.** 15 ನೇ ಶತಮಾನದ ಭಾರತದಲ್ಲಿ ಜರುಗಿದ ಸಾಮಾಜಿಕ ಸುಧಾರಣಾ ಚಳುವಳಿಯ ಮುಖ್ಯ ಪರಿಣಾಮ :

(1) ಧಾರ್ಮಿಕ ಜೀವನ ಸುಧಾರಣೆ
(2) ಹಿಂದೂ ಸಮಾಜದ ಬಲಪಡಿಸುವಿಕೆ
(3) ಶಿಕ್ಷಣದ ಪ್ರಸಾರ
(4) ಸಾಮಾಜಿಕ ಪಿಡುಗುಗಳ ನಿರ್ಮೂಲನೆ

**111.** ಭೂಮಿಯ ಕೇಂದ್ರವಲಯವನ್ನು 'ನಿಫೆ' (Nife) ಎಂದು ಕರೆಯಲು ಕಾರಣ :

(1) ನಿಕ್ಕಲ್ ಮತ್ತು ಕಬ್ಬಿಣದ ವಸ್ತುಗಳು ಕೂಡಿರುವುದು.

(2) ನಿಕ್ಕಲ್ ಮತ್ತು ತಾಮ್ರದ ವಸ್ತುಗಳು ಕೂಡಿರುವುದು.

(3) ನಿಕ್ಕಲ್ ಮತ್ತು ಅಲ್ಯುಮಿನಿಯಂ ವಸ್ತುಗಳು ಕೂಡಿರುವುದು.

(4) ನಿಕ್ಕಲ್ ಮತ್ತು ಮ್ಯಾಗ್ನೀಷಿಯಂ ವಸ್ತುಗಳು ಕೂಡಿರುವುದು.

**112.** ವಾಯು ಮಂಡಲದ ಅತ್ಯಂತ ಕೆಳಪದರು ಇದಾಗಿದೆ.

(1) ಮಧ್ಯಂತರದ ಮಂಡಲ
(2) ಸಮೋಷ್ಣ ಮಂಡಲ
(3) ಪರಿವರ್ತನಾ ಮಂಡಲ
(4) ಅಯಾನು ಮಂಡಲ್ನೈ

**113.** 'A' ಪಟ್ಟಿಯಲ್ಲಿನ ಪ್ರದೇಶಗಳಿಗೆ 'B' ಪಟ್ಟಿಯಲ್ಲಿನ ಆವರ್ತ ಮಾರುತಗಳಿಗೆ ಹೊಂದಿಸಿ.

| | 'A' ಪಟ್ಟಿ | | 'B' ಪಟ್ಟಿ |
|---|---|---|---|
| 1 | ಚೀನಾ | a | ವಿರ್ಲ್‌ಪೂಲ್ |
| 2 | ಅಮೇರಿಕಾ | b | ವಿಲ್ಲಿ ವಿಲ್ಲೀಸ್ |
| 3 | ಆಸ್ಟ್ರೇಲಿಯಾ | c | ಟೈಫೂನ್ |
| 4 | ರಷ್ಯಾ | d | ಹರಿಕೇನ್ |

ಈ ಕೆಳಗೆ ನೀಡಿರುವ ಪಟ್ಟಿಯಲ್ಲಿ ಸೂಕ್ತ ಉತ್ತರ ಗುರುತಿಸಿ.

(1) 1-c, 2-d, 3-b, 4-a
(2) 1-d, 2-c, 3-a, 4-b
(3) 1-b, 2-a, 3-d, 4-c
(4) 1-a, 2-b, 3-c, 4-d

**114.** ಹಿಂದೂ ಮಹಾಸಾಗರವು ಹೊಂದಿರುವ ಖಂಡಗಳ ಮೇರೆಗಳು :

(1) ಆಸ್ಟ್ರೇಲಿಯಾ, ಏಷ್ಯಾ, ದಕ್ಷಿಣ ಅಮೇರಿಕಾ
(2) ಆಫ್ರಿಕಾ, ದಕ್ಷಿಣ ಅಮೇರಿಕಾ, ಆಸ್ಟ್ರೇಲಿಯಾ
(3) ಆಫ್ರಿಕಾ, ಏಷ್ಯಾ, ಆಸ್ಟ್ರೇಲಿಯಾ
(4) ಆಸ್ಟ್ರೇಲಿಯಾ, ಏಷ್ಯಾ, ಉತ್ತರ ಅಮೇರಿಕಾ



www.inyatrust.com

www.inyatrust.com



**115.** ಭಾರತದಂತಹ ರಾಷ್ಟ್ರಕ್ಕೆ ಗಡಿರೇಖೆಯು ಅವಶ್ಯಕವಾಗಿದೆ. ಕಾರಣ

(1) ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಪದಾರ್ಥಗಳನ್ನು ಸರಬರಾಜು ಮಾಡಲು

(2) ರೈಲುಮಾರ್ಗಗಳಿಗೆ ಪೂರಕವಾಗಲು

(3) ಕೈಗಾರಿಕೆಗಳ ಸಿದ್ಧವಸ್ತುಗಳನ್ನು ವಿತರಿಸಲು

(4) ದೀರ್ಘವಾದ ಭೂಗಡಿಯನ್ನು ರಕ್ಷಿಸಲು

**116.** ಕೋಲ್ಕತ್ತಾವನ್ನು 'ಚಹದ ಬಂದರು' ಎಂದು ಕರೆಯಲು ಕಾರಣ :

(1) ಡಾರ್ಜಿಲಿಂಗ್‌ನಲ್ಲಿ ಬೆಳೆಯುವ ಚಹವನ್ನು ಕೋಲ್ಕತ್ತಾ ಮೂಲಕ ರಫ್ತು ಮಾಡುತ್ತಾರೆ.

(2) ಪಶ್ಚಿಮ ಬಂಗಾಳದ ಜನರು ಚಹವನ್ನು ಹೆಚ್ಚಾಗಿ ಬಳಸುತ್ತಾರೆ.

(3) ಕೋಲ್ಕತ್ತಾದಲ್ಲಿ ತಯಾರಿಸುವ ಚಹ ಅತೀ ಉತ್ಕೃಷ್ಟವಾಗಿರುತ್ತದೆ.

(4) ಕೋಲ್ಕತ್ತಾದಲ್ಲಿ ಬಂದಿಳಿದಿದ್ದ ಚಹವನ್ನು ಸಮುದ್ರಕ್ಕೆ ಎಸೆಯುತ್ತಾರೆ.

**117.** ಭಾರತದಲ್ಲಿ ಪ್ರಾರಂಭಿಸಲ್ಪಟ್ಟ ಮೊದಲ ರೈಲುಮಾರ್ಗ :

(1) ಕೋಲ್ಕತ್ತಾದಿಂದ ರಾಣಿಗಂಜ್‌ವರೆಗೂ (2) ಚೆನ್ನೈಯಿಂದ ಅರಕೋಣಂವರೆಗೂ

(3) ಬೆಂಗಳೂರಿನಿಂದ ಚೆನ್ನೈವರೆಗೂ (4) ಮುಂಬಯಿಯಿಂದ ಥಾಣಾದವರೆಗೂ

**118.** 'ನವಸೇವಾ' ಬಂದರಿನ ನಿರ್ಮಾಣದಿಂದ ಆಗಿರುವ ಮುಖ್ಯ ಪರಿಣಾಮ :

(1) ಮುಂಬೈ ಬಂದರಿನ ಸಾರಿಗೆಯ ಒತ್ತಡ ಕಡಿಮೆಯಾಗಿದೆ.

(2) ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರೋತ್ಸಾಹಿಸಿದಂತಾಗಿದೆ.

(3) ಮುಂಬೈ ಬಂದರಿನ ಹಿನ್ನಾಡು ಕಡಿಮೆಯಾಗಿದೆ.

(4) ವಿದೇಶಿಯರು ನುಸುಳಲು ಸಹಕಾರಿಯಾಗಿದೆ.

**119.** ಬೇರೆ ದೇಶಗಳಿಗೆ ರಫ್ತಾಗಿ ನಮ್ಮ ದೇಶದ ವಿದೇಶಿ ವಿನಿಮಯಕ್ಕೆ ಹೆಚ್ಚು ಗಳಿಕೆ ಸಿಗುತ್ತಿರುವ ಕೃಷಿ ಉತ್ಪನ್ನಗಳಿವು.

(1) ಸೆಣಬು, ಚಹ, ಹೂವು, ರೇಷ್ಮೆ. (2) ಸೆಣಬು, ತರಕಾರಿ, ಜೋಳ, ಭತ್ತ.

(3) ಸೆಣಬು, ಹತ್ತಿ, ಕಬ್ಬು, ಗೋಧಿ. (4) ಸೆಣಬು, ಹತ್ತಿ, ಕಾಫಿ, ಸಾಂಬಾರು ಪದಾರ್ಥ.

**120.** ವಿದ್ಯಾರ್ಥಿಯೊಬ್ಬ ಪೆನ್ನು ಕೊಂಡು ಬಳಸುತ್ತಾನೆ. ಇದು ಯಾವ ಬಗೆಯ ಆರ್ಥಿಕ ಚಟುವಟಿಕೆ ?

(1) ಉತ್ಪಾದಕ ಚಟುವಟಿಕೆ (2) ವಿನಿಮಯ ಚಟುವಟಿಕೆ

(3) ಅನುಭೋಗಿ ಚಟುವಟಿಕೆ (4) ವಿತರಣಾ ಚಟುವಟಿಕೆ

**121.** ಭಾರತದಂತಹ ರಾಷ್ಟ್ರದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಅತ್ಯವಶ್ಯಕ. ಕಾರಣ

(1) ವೈವಿಧ್ಯತೆಯಲ್ಲಿ ಏಕತೆಯನ್ನು ರೂಪಿಸಲು. (2) ಮೀಸಲಾತಿಯನ್ನು ಮುಂದುವರಿಸಿಕೊಂಡು ಹೋಗಲು.

(3) ಸಂಸ್ಕೃತಿಯನ್ನು ರಕ್ಷಿಸಲು. (4) ವಿದೇಶಿ ಸಂಸ್ಕೃತಿಯ ಅನುಕರಣೆ ತಡೆಗಟ್ಟಲು.



www.inyatrust.com

www.inyatrust.com



**122.** 'ಭಾರತೀಯ ಪತ್ರಿಕಾ ಪರಿಷತ್ತು' ಸಂಸ್ಥೆಯ ಉದ್ದೇಶ ಏನೆಂದರೆ

(1) ಪತ್ರಿಕೆಗಳ ಪ್ರಸಾರ ಸಂಖ್ಯೆ ಹೆಚ್ಚಿಸುವುದಕ್ಕಾಗಿ.

(2) ನಿಯತಕಾಲಿಕೆಗಳ ಮುದ್ರಣಕ್ಕಾಗಿ.

(3) ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ.

(4) ನಿಯತ ಕಾಲಿಕೆಗಳ ಪ್ರಸಾರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ.

**123.** ರಾಜ್ಯಪಾಲರ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದೆ.

(1) ವಿಧಾನ ಪರಿಷತ್‌ಗೆ ಎಂಟನೇ ಒಂದರಷ್ಟು ಸದಸ್ಯರನ್ನು ನೇಮಿಸುವ ಅಧಿಕಾರವಿದೆ.

(2) ರಾಜ್ಯದಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸುವ ಅಧಿಕಾರವಿದೆ.

(3) ಸುಪ್ರಿಂ ಕೋರ್ಟ್ ನ್ಯಾಯಾಧೀಶರ ನೇಮಕಾತಿಗೆ ಸಲಹೆ ನೀಡುವ ಅಧಿಕಾರವಿದೆ.

(4) ರಾಜ್ಯಸಭೆಯ ಅಧ್ಯಕ್ಷರನ್ನು ನೇಮಿಸುವ ಅಧಿಕಾರವಿದೆ.

**124.** ನಮ್ಮ ರಾಷ್ಟ್ರವನ್ನು ಗಣರಾಜ್ಯವೆಂದು ಕರೆಯಲು ಕಾರಣ :

(1) ನಮ್ಮ ರಾಷ್ಟ್ರವು ವಿವಿಧ ರಾಜ್ಯಗಳಿಂದ ಕೂಡಿರುವುದರಿಂದ.

(2) ನಮ್ಮ ರಾಷ್ಟ್ರವನ್ನು ಪ್ರಧಾನಮಂತ್ರಿ ಆಳ್ವಿಕೆ ಮಾಡುವುದರಿಂದ.

(3) ನಮ್ಮ ರಾಷ್ಟ್ರವು ಕೇಂದ್ರಾಡಳಿತ ಪ್ರದೇಶಕ್ಕೆ ಒಳಪಡುವುದರಿಂದ.

(4) ನಮ್ಮ ರಾಷ್ಟ್ರದ ರಾಷ್ಟ್ರಾಧ್ಯಕ್ಷರನ್ನು ಚುನಾಯಿಸಲ್ಪಡುವುದರಿಂದ.

**125.** ಮಾರುಕಟ್ಟೆಯ ಎರಡು ಆಧಾರ ಸ್ತಂಭಗಳೆಂದರೆ,

(1) ಮಾರಾಟಗಾರರು ಮತ್ತು ದಲ್ಲಾಳಿಗಳು (2) ಬೇಡಿಕೆ ಮತ್ತು ಪೂರೈಕೆದಾರ

(3) ಕೊಳ್ಳುವವರು ಮತ್ತು ದಲ್ಲಾಳಿಗಳು (4) ಉತ್ಪಾದಕರು ಮತ್ತು ಗ್ರಾಹಕರು

**126.** ಭಾರತ ಸಂವಿಧಾನ ರಚನಾ ಸಮಿತಿಯಲ್ಲಿ ಕರ್ನಾಟಕದಿಂದ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸಿದವರು.

(1) ಬಿ.ಡಿ. ಜತ್ತಿ (2) ಹೆಚ್.ಡಿ. ದೇವೇಗೌಡ

(3) ಎಸ್. ನಿಜಲಿಂಗಪ್ಪ (4) ವೀರೇಂದ್ರ ಪಾಟೀಲ್

**127.** ಸಾಮಾನ್ಯವಾಗಿ ರಾಜ್ಯದ ವಿಧಾನ ಪರಿಷತ್ತಿನ ಸಂಖ್ಯಾಬಲ :

(1) ವಿಧಾನ ಸಭೆಯ ಸದಸ್ಯರ ಸಂಖ್ಯೆಯ ಅರ್ಧದಷ್ಟು.

(2) ವಿಧಾನ ಸಭೆಯ ಸದಸ್ಯರ ⅓ ರಷ್ಟು.

(3) ವಿಧಾನ ಸಭೆಯ ಸದಸ್ಯರ ¼ ರಷ್ಟು.

(4) ವಿಧಾನ ಸಭೆಯ ಸದಸ್ಯರ ಸಂಖ್ಯೆಯಷ್ಟೆ.



www.inyatrust.com

www.inyatrust.com



**128.** ಭಾರತದ ರಾಷ್ಟ್ರಪತಿಯಾಗಲು ಇರಬೇಕಾದ ಅರ್ಹತೆಗಳು :

a. 35 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟಿರಬೇಕು.

b. 50 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟಿರಬೇಕು.

c. ಭಾರತದ ಪ್ರಜೆಯಾಗಿರಬೇಕು.

d. ಪಾಂಡಿತ್ಯ ಹೊಂದಿದ ವ್ಯಕ್ತಿಯಾಗಿರಬೇಕು.

e. ಭಾರತ ಸರ್ಕಾರದಲ್ಲಿ ಯಾವುದೇ ಲಾಭದಾಯಕ ಹುದ್ದೆ ಹೊಂದಿರಬಾರದು.

ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a, c ಮತ್ತು e ರ ವಿವರಣೆಗಳು ಸರಿ. (2) b, c ಮತ್ತು e ರ ವಿವರಣೆಗಳು ಸರಿ.

(3) a, c ಮತ್ತು d ರ ವಿವರಣೆಗಳು ಸರಿ. (4) b, d ಮತ್ತು e ರ ವಿವರಣೆಗಳು ಸರಿ.

**129.** ದ್ವಿಸದನಗಳ ಶಾಸನ ಸಭೆಯನ್ನು ಹೊಂದಿರುವ ರಾಜ್ಯಗಳು :

(1) ಪಶ್ಚಿಮ ಬಂಗಾಳ, ಪಂಜಾಬ್, ಉತ್ತರ ಪ್ರದೇಶ, ಮಧ್ಯ ಪ್ರದೇಶ.

(2) ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಗೋವಾ.

(3) ಓರಿಸ್ಸಾ, ಪಶ್ಚಿಮ ಬಂಗಾಳ, ಮೇಘಾಲಯ, ತಮಿಳುನಾಡು.

(4) ಬಿಹಾರ, ಕರ್ನಾಟಕ, ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರ.

**130.** ನಮ್ಮ ರಾಷ್ಟ್ರೀಯ ಧ್ಯೇಯವಾಕ್ಯ 'ಸತ್ಯಮೇವ ಜಯತೇ' ಎಂಬುದನ್ನು ಇದರಿಂದ ಆಯ್ದುಕೊಳ್ಳಲಾಗಿದೆ.

(1) ಕಠೋಪನಿಷತ್ತು (2) ಮುಂಡಕ ಉಪನಿಷತ್ತು

(3) ಋಗ್ವೇದ (4) ಯಜುರ್ವೇದ

**131.** ಇತಿಹಾಸ ಬೋಧನೆಯ ಸಾಮಾನ್ಯ ಉದ್ದೇಶ :

(1) ಉತ್ತಮ ಪೌರತ್ವದ ಲಕ್ಷಣಗಳನ್ನು ಬೆಳೆಸುವುದು.

(2) ಭೂಮಿಯ ಅಧ್ಯಯನದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸುವುದು.

(3) ವಿದ್ಯಾರ್ಥಿಗಳಲ್ಲಿ ಪೌರತ್ವದ ಪ್ರಜ್ಞೆ ಬೆಳೆಸುವುದು.

(4) ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಚಿಂತನಾ ಶಕ್ತಿ ಹೆಚ್ಚಿಸುವುದು.

**132.** ಇತಿಹಾಸ ಶಿಕ್ಷಕನು ಮಕ್ಕಳಲ್ಲಿ ನಿರೂಪಣಾ ಶೈಲಿಯನ್ನು ಬೆಳೆಸಲು ಈ ಬೋಧನಾ ಪದ್ಧತಿಯನ್ನು ಬಳಸಬೇಕು.

(1) ಉಪನ್ಯಾಸ ಪದ್ಧತಿ (2) ಸಮಸ್ಯಾ ಪರಿಹಾರ ಪದ್ಧತಿ

(3) ಮೂಲಾಧಾರ ವಿಧಾನ (4) ಸಮೀಕ್ಷೆ ವಿಧಾನ



www.inyatrust.com

www.inyatrust.com



133. ಇತಿಹಾಸ ಬೋಧಿಸುವ ಶಿಕ್ಷಕನು ಹೊಂದಿರಲೇ ಬೇಕಾದ ಲಕ್ಷಣ ಇದಾಗಿದೆ.

(1) ಸಮಾಜ ಸೇವೆ

(2) ಸಮಾಜದೊಂದಿಗೆ ಉತ್ತಮ ಸಂಬಂಧ

(3) ಕ್ಷೇತ್ರ ಅಧ್ಯಯನ ಮತ್ತು ಪ್ರವಾಸ ಕೈಗೊಳ್ಳುವುದು

(4) ರಾಜಕೀಯ ಭಾಷೆ ಹೊಂದಿರುವುದು

134. ಸಮಾಜ ವಿಜ್ಞಾನವನ್ನು ಬೋಧಿಸಲು ಬಳಸುವ ಈ ಬೋಧನಾ ವಿಧಾನದಲ್ಲಿ ಸನ್ನಿವೇಶವನ್ನು ಒದಗಿಸಿ ಕೊಡಲಾಗುವುದು.

(1) ಜೀವನ ಚರಿತ್ರಾ ವಿಧಾನ

(2) ಯೋಜನಾ ಪದ್ಧತಿ

(3) ಚರ್ಚಾ ಪದ್ಧತಿ

(4) ಉಪನ್ಯಾಸ ಪದ್ಧತಿ

135. ಇತಿಹಾಸ ಕೊಠಡಿಯ ಒಂದು ಭಾಗದಲ್ಲಿ ಈ ಕೆಳಗಿನ ಯಾವ ವಿಭಾಗವನ್ನು ಸ್ಥಾಪಿಸಲೇ ಬೇಕು ?

(1) ವಸ್ತು ಸಂಗ್ರಹಾಲಯ

(2) ಪ್ರಯೋಗಾಲಯ

(3) ಗಣಿತದ ಕಿಟ್

(4) ಭಾಷಾ ಉಪಕರಣಗಳು

136. ಇತಿಹಾಸ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಕಾಲ ಪ್ರಜ್ಞೆಯನ್ನು ಬೆಳೆಸಲು ಈ ಬೋಧನೋಪಕರಣಗಳನ್ನು ಬಳಸುವುದು.

(1) ಕಪ್ಪು ಹಲಗೆ

(2) ಚಿತ್ರಪಟ

(3) ವಿಸ್ತರಣಾ ಪಟ

(4) ಕಾಲರೇಖೆ

137. ಇತಿಹಾಸ ಬೋಧನೆ ಹೆಚ್ಚು ಪರಿಣಾಮಕಾರಿಯಾಗಲು ಯಾವ ಚಟುವಟಿಕೆ ಹೆಚ್ಚು ಪ್ರಭಾವ ಬೀರುತ್ತದೆ ?

(1) ನಾಟಕಾಭಿನಯ

(2) ಚರ್ಚಾಸ್ಪರ್ಧೆ

(3) ರೇಡಿಯೋ ಬಳಕೆ

(4) ಕಪ್ಪು ಹಲಗೆ ಬಳಕೆ

138. ಇತಿಹಾಸ ಶಿಕ್ಷಕನು ತನ್ನ ವೃತ್ತಿ ಬೆಳವಣಿಗೆಗಾಗಿ ಈ ಕೆಳಗಿನ ಯಾವ ಕ್ರಮವನ್ನು ಕೈಗೊಳ್ಳಬೇಕು ?

(1) ಹೆಚ್ಚು ಹೆಚ್ಚು ಪುಸ್ತಕಗಳನ್ನು ಅಧ್ಯಯನ ಮಾಡಬೇಕು.

(2) ಪ್ರಯೋಗಾಲಯದಲ್ಲಿ ಹೆಚ್ಚು ಕಾಲ ಕಳೆಯಬೇಕು.

(3) ಕ್ಷೇತ್ರ ಪ್ರವಾಸವನ್ನು ಕೈಗೊಳ್ಳುವುದು.

(4) ಸಂಘ-ಸಂಸ್ಥೆಗಳ ಸದಸ್ಯನಾಗಿರುವುದು.



www.inyatrust.com

www.inyatrust.com



**139.** ವಿದ್ಯಾರ್ಥಿಯು ಸಮುದ್ರಗುಪ್ತನ ಸಾಧನೆಯನ್ನು ವಿವರಿಸುವನು. ಇದು ಇತಿಹಾಸದ ಯಾವ ಉದ್ದೇಶಕ್ಕೆ ಸಂಬಂಧಿಸಿದೆ ?

(1) ಜ್ಞಾನ (2) ತಿಳುವಳಿಕೆ

(3) ಅನ್ವಯ (4) ಕೌಶಲ

**140.** ಇತಿಹಾಸ ಬೋಧನಾ ವಿಧಾನಗಳಲ್ಲಿ ಒಂದಾದ ಯೋಜನಾ ವಿಧಾನ ಈ ತತ್ವಕ್ಕೆ ಬದ್ಧವಾಗಿದೆ.

(1) ಮಾಡಿ ಕಲಿ, ಜೀವಿಸುತ್ತಾ ಕಲಿ ತತ್ವ

(2) ಮಹಾನ್ ಪುರುಷ ಸಿದ್ಧಾಂತ ತತ್ವ

(3) ಹೋಲಿಕಾ ತತ್ವ

(4) ಅಣುವಿನಷ್ಟು ಪಠ್ಯಾಂಶಗಳನ್ನು ಬ್ರಹ್ಮಾಂಡದಷ್ಟು ವಿಸ್ತರಿಸುವ ತತ್ವ

**141.** ಇತಿಹಾಸ ಶಿಕ್ಷಕರಾಗಿ ನೀವು ಅಶೋಕ ಸಾಮ್ರಾಟನ ತಂದೆ ಯಾರು ಎಂಬ ಪ್ರಶ್ನೆ ಕೇಳುವುದರ ಮೂಲಕ ಈ ಕೆಳಗಿನ ಯಾವ ಉದ್ದೇಶವನ್ನು ಈಡೇರಿಸುವಿರಿ ?

(1) ಅನ್ವಯ (2) ಕೌಶಲ

(3) ಜ್ಞಾನ (4) ತಿಳುವಳಿಕೆ

**142.** ಸ್ಥಳೀಯ ಇತಿಹಾಸ ಬೋಧನೆಯಲ್ಲಿ ಯಶಸ್ವಿಯಾಗಲು ಶಿಕ್ಷಕನು ಈ ಚಟುವಟಿಕೆ ಕೈಗೊಳ್ಳಬೇಕು :

(1) ಪ್ರವಾಸ ಕೈಗೊಳ್ಳುವುದು.

(2) ಸ್ಥಳೀಯ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಅಧ್ಯಯನ.

(3) ವಿದ್ಯಾರ್ಥಿಗಳ ಸಂದರ್ಶನ.

(4) ಅಂತರರಾಷ್ಟ್ರೀಯ ಮಟ್ಟದ ಇತಿಹಾಸದ ಅಧ್ಯಯನ.

**143.** ಇತಿಹಾಸ ಶಿಕ್ಷಕರಾದ ನಿಮಗೆ ಈ ಕೆಳಗಿನ ಯಾವ ವಿಷಯ ಇತಿಹಾಸ ಬೋಧನೆಗೆ ಸಹಕಾರಿ-ಯಾಗುತ್ತದೆ ?

(1) ಸಾಹಿತ್ಯ (2) ಭೌತಶಾಸ್ತ್ರ

(3) ಅರ್ಥಶಾಸ್ತ್ರ (4) ರಸಾಯನಶಾಸ್ತ್ರ

**144.** ಇತಿಹಾಸ ಪಠ್ಯವಸ್ತುವಿನ ಗುಣ-ಲಕ್ಷಣಗಳಲ್ಲಿ ಒಂದಾಗಿದೆ.

(1) ವ್ಯವಹಾರಿಕ ಜ್ಞಾನ ಬೆಳೆಸುವುದು. (2) ಸಂವಹನ ಕೌಶಲ ಬೆಳೆಸುವುದು.

(3) ವೈಜ್ಞಾನಿಕ ಮನೋಭಾವ ಬೆಳೆಸುವುದು. (4) ಅಂತರ್‌ರಾಷ್ಟ್ರೀಯ ತಿಳುವಳಿಕೆ ಮೂಡಿಸುವುದು.



www.inyatrust.com

www.inyatrust.com



145. ಇತಿಹಾಸ ಶಿಕ್ಷಕನು ತರಗತಿಯಲ್ಲಿ ಭೂಪಟವನ್ನು ಬಳಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಈ ಸಾಮರ್ಥ್ಯವನ್ನು ಬೆಳೆಸುವುದು.

(1) ಭಾಷಾ ಸಾಮರ್ಥ್ಯ (2) ಓದುಗಾರಿಕೆ ಸಾಮರ್ಥ್ಯ

(3) ಸ್ಥಳ ಪ್ರಜ್ಞೆ ಸಾಮರ್ಥ್ಯ (4) ಕಾಲ ಪ್ರಜ್ಞೆ ಸಾಮರ್ಥ್ಯ

146. ಮೌರ್ಯ ಸಾಮ್ರಾಜ್ಯದ ಬೋಧನೆಯ ನಂತರ ಯಶಸ್ವಿಯಾಗಿ ಮೌಲ್ಯಮಾಪನ ಮಾಡಲು ಯಾವ ಬೋಧನೋಪಕರಣ ಬಳಸುವಿರಿ ?

(1) ಸ್ವತಂತ್ರ ಪೂರ್ವ ಭಾರತದ ಭೂಪಟ (2) ಭಾರತದ ಭೂಪಟ

(3) ಕರ್ನಾಟಕದ ಭೂಪಟ (4) ಗ್ಲೋಬ್

147. ಇತಿಹಾಸ ಶಿಕ್ಷಕರಾಗಿ ನೀವು ವಿದ್ಯಾರ್ಥಿಗಳನ್ನು ಈ ಕೆಳಗಿನ ಯಾವ ಸ್ಥಳಕ್ಕೆ ಪ್ರವಾಸ ಕರೆದುಕೊಂಡು ಹೋಗಲು ಬಯಸುತ್ತೀರಿ ?

(1) ಯಾಣ (2) ಮಂಗಳೂರು ಬೀಚ್

(3) ಹಂಪೆ (4) ಹಟ್ಟಿ ಚಿನ್ನದ ಗಣಿ

148. ವಿದ್ಯಾರ್ಥಿಗಳ ಅನ್ವಯ ಸಾಮರ್ಥ್ಯವನ್ನು ಪರೀಕ್ಷಿಸಲು ಈ ಕೆಳಗಿನ ಯಾವ ಪ್ರಶ್ನೆ ಸಹಾಯಕವಾಗುತ್ತದೆ ?

(1) ಕಳಿಂಗ ಮಹಾಯುದ್ಧ ಯಾರ ಯಾರ ಮಧ್ಯೆ ನಡೆಯಿತು ?

(2) ಕಳಿಂಗ ಮಹಾಯುದ್ಧದ ಪರಿಣಾಮ ವಿಶ್ಲೇಷಿಸಿ.

(3) ಕಳಿಂಗ ಮಹಾಯುದ್ಧದ ಬಗ್ಗೆ ವಿವರಿಸಿ.

(4) ಕಳಿಂಗ ಮಹಾಯುದ್ಧ ಎಷ್ಟರಲ್ಲಿ ನಡೆಯಿತು ?

149. ಸಮಾಜ ವಿಜ್ಞಾನ ತರಗತಿಯಲ್ಲಿ ನಡೆಯುವ ಮೌಲ್ಯಮಾಪನವು ಹೀಗಿರಬೇಕು.

(1) ವಿಷಯಾಧಾರಿತವಾಗಿರಬೇಕು. (2) ಸ್ಮರಣೆ ಆಧಾರಿತವಾಗಿರಬೇಕು.

(3) ಮಾಹಿತಿ ಆಧಾರಿತವಾಗಿರಬೇಕು. (4) ಸಾಮರ್ಥ್ಯಾಧಾರಿತವಾಗಿರಬೇಕು.

150. ಸಮಾಜ ವಿಜ್ಞಾನ ಮೌಲ್ಯಮಾಪನದಲ್ಲಿ ಅಂಕಗಳ ಬದಲಿಗೆ ಶ್ರೇಣಿ ವ್ಯವಸ್ಥೆಯನ್ನು ಜಾರಿಗೆ ತಂದ ವಿನೂತನ ಕಾರ್ಯಕ್ರಮ.

(1) ನಿರಂತರ ಮತ್ತು ಸಮಗ್ರ ಮೌಲ್ಯ ಮಾಪನ ಪದ್ಧತಿ

(2) ಚೈತನ್ಯ ಪದ್ಧತಿ

(3) ತ್ರೈಮಾಸಿಕ ಪದ್ಧತಿ

(4) ಸೆಮಿಸ್ಟರ್ ಪದ್ಧತಿ



www.inyatrust.com

www.inyatrust.com

**EXAMINATION CODE : TET**

**Question Booklet Sl. No.**

**KMSS**

## QUESTION BOOKLET - PAPER-II
## (KANNADA MEDIUM - SOCIAL SCIENCE)

**Language - I : (Kannada, English, Urdu, Tamil, Telugu, Marathi, Hindi, Sanskrit)**
**Language - II : (Kannada, English, Urdu, Tamil, Telugu, Marathi, Hindi, Sanskrit)**
**Child Development & Pedagogy and Social Science**
**(Read the instructions given in the Question Booklet)**

**MAXIMUM MARKS : 150** | **MAXIMUM TIME : 2.30 HOURS**

**(Including initial 10 minutes for filling O.M.R. Answer Sheet)**

SEAL

### INSTRUCTIONS TO THE CANDIDATES

1. The sealed Question Booklet containing 150 questions, enclosed with O.M.R. Answer Sheet is given to you.
2. Verify whether the given Question Booklet is of the same PAPER/MEDIUM which you have opted.
3. This Question Booklet has four Parts I, II, III and IV consisting of 150 Objective Type Questions, each carrying one mark.

   Part-I: Language – I (Kannada/English/Urdu/Tamil/Telugu/Marathi/Hindi/Sanskrit) (Q. 1 to Q. 30)

   Part-II: Language – II (Kannada/English/Urdu/Tamil/Telugu/Marathi/Hindi/Sanskrit) (Q. 31 to Q. 60)

   Part-III: Child Development and Pedagogy (Q. 61 to Q. 90)

   Part-IV: Social Studies/Social Science (Q. 91 to Q. 150)
4. Part-I contains 30 questions for Language-I and Part-II contains 30 questions for Language-II. In this Question Booklet, Questions pertaining to all languages have been given. The languages being answered must tally with the languages opted for in your Application Form/as mentioned in the admission ticket.
5. Candidates are required to attempt questions in Part-II (Language-II) in any language other than the one chosen as Language-I (in Part-I) from the list of languages as mentioned in the application form.
6. Part-III Child Development and Pedagogy (Q. 61 to Q. 90) and Part-IV Social Studies/Social Science (Q. 91 to Q. 150) contains questions in different mediums have been given in this Test Booklet. The questions answered must tally with the medium and optional opted for, in your Application Form/as mentioned in the admission ticket.
7. Ensure that your Question Booklet No. and OMR Answer Sheet No. are the same. In case of discrepancy, the candidate should immediately report the matter to the invigilator for the replacement of the Question Booklet and the OMR Answer Sheet before answering the questions.
8. Take out the Question Paper Booklet from the plastic pouch and open the Question Paper seal carefully and take out the enclosed OMR Answer Sheet out side the question booklet and fill up the general information from Sl. No. 1 to 13 of OMR Answer Sheet. If you fail to fill up the details in the form of alphabet and signs as instructed, you will be personally responsible for consequences arising during scanning and scoring of your answer sheet.



www.inyatrust.com